







ಕೈಗಾರಿಕಾ ಪ್ರದೇಶದಲ್ಲಿ ದೇಶದ ಮೊತ್ತಮೊದಲ ಖನಿಜ ಮತ್ತು ಕ್ರಿಸ್ಟಲ್‌ಗಳ ಸಂಗ್ರಹಾಲಯವಿದೆ. ಇದೊಂದು ಖಾಸಗಿ ಸಂಗ್ರಹಾಲಯ. ಕೆ.ಸಿ.ಪಾಂಡೆ ಎಂಬ ಸಂಗ್ರಾಹಕ ಜಗತ್ತಿನಲ್ಲೇ ಅತ್ಯಂತ ಶ್ರೀಮಂತ ಎನ್ನಬಹುದಾದ ಈ ಹರಳು ಕಲ್ಲಿನ ಸಂಗ್ರಹಾಲಯವನ್ನು 2002ರಲ್ಲಿ ಸ್ಥಾಪಿಸಿದ್ದಾರೆ.

ಪ್ರತಿವರ್ಷ ಎರಡು ಲಕ್ಷಕ್ಕೂ ಹೆಚ್ಚು ಜನ ನಾಸಿಕ್–ಶಿರಡಿ ಹೆದ್ದಾರಿಯ ಸಿನ್ನರ್‌ನಲ್ಲಿರುವ ಈ ಸಂಗ್ರಹಾಲಯಕ್ಕೆ ಭೇಟಿ ನೀಡುತ್ತಾರೆ. ಇಲ್ಲಿ ಸಂಗ್ರಹಗೊಂಡ ಅಮೂಲ್ಯ ಹರಳುಗಳ ಮಾರುಕಟ್ಟೆಯ ಬೆಲೆ ಎಷ್ಟಾಗಬಹುದೋ ಊಹಿಸುವುದು ಕಷ್ಟ. ಮೂಲತಃ ಇವು ಕಲ್ಲುಗಳೆಂದರೆ ನಂಬುವುದೂ ಕಷ್ಟವೇ!.



ಮರಾಠಿಯಲ್ಲಿ ಗಾರ್ಗೋಟಿ ಎಂದರೆ ಹರಳು ಕಲ್ಲು ಎಂದೇ ಅರ್ಥ. ಸೂಪರ್ಬ್ ಇಂಡಿಯಾ ಮಿನಿರಲ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನಲ್ಲಿ ಈ ಸಂಗ್ರಹಾಲಯವಿದೆ. ನಿವೃತ್ತ ಸೇನಾನಿ ಕೆ.ಸಿ. ಪಾಂಡೆಯವರ ವೈಯಕ್ತಿಕ ಸಂಗ್ರಹವಾಗಿರುವ ಗಾರ್ಗೋಟಿಯಲ್ಲಿ ಹೆಚ್ಚಾಗಿ ಮಹಾರಾಷ್ಟ್ರ ಹಾಗೂ ಗುಜರಾತ್ ಪ್ರದೇಶಗಳಲ್ಲಿ ಸಿಕ್ಕಿದ ಖನಿಜ ಮತ್ತು ಸ್ಫಟಿಕಶಿಲೆಗಳ ಸಂಗ್ರಹವಿದೆ. ಅಲ್ಲದೇ ಬೇರೆ ದೇಶಗಳಿಂದಲೂ ಅವರು ಸಂಗ್ರಹಿಸಿದ್ದಾರೆ. ಸಂಗ್ರಹಾಲಯ ವ್ಯವಸ್ಥಿತವಾಗಿದ್ದು ಪ್ರತಿಯೊಂದು ಕಲ್ಲಿನ ಮೂಲ ಹಾಗೂ ಗುಣ ವಿಶೇಷಗಳನ್ನು ವಿವರಿಸಲಾಗಿದೆ. ಸೂಕ್ತ ವಿವರಣೆಕಾರರು ಮಾಹಿತಿ ನೀಡುತ್ತಾರೆ.

ಸಿನ್ನರ್‌ನ ಈ ಸಂಗ್ರಹಾಲಯದ ಒಳಹೊಕ್ಕರೆ ಮೊದಲಿಗೆ ಎದುರಾಗುವುದು ಭೂಗೋಳದ ಮೇಲೆ ನಿಂತಿರುವ ಭಾರತ ಮಾತೆಯ ಮೂರ್ತಿ. ಮುಂದೆ ಬಂದರೆ ಬೆಳಕಿಗಾಗಿ ಮಾಡುವ ಗಾಜಿನ ಮಾಡಿನಲ್ಲಿ ಭೂಗೋಳವೇ ಕಾಣುತ್ತದೆ. ಅಲ್ಲಿ ಭಾರತವನ್ನು ಹುಡುಕುವುದು ಹೆಮ್ಮೆಯೆನಿಸುತ್ತದೆ.

ನಂತರ ದೇಶೀಯ ಹಾಗೂ ವಿದೇಶೀಯ ಕ್ರಿಸ್ಟಲ್‌ಗಳನ್ನು ಒಪ್ಪ ಓರಣವಾಗಿ ಜೋಡಿಸಿರುವುದನ್ನು ಕಾಣಬಹುದು. ಅದರಲ್ಲಿ ಶ್ವೇತವರ್ಣದ ಹಿಮಾಲಯನ್ ಪ್ರಭೇದದ ಶಿಲೆಯಲ್ಲಿ ಕಡೆದ ಮಹಾವೀರನ ಮೂರ್ತಿಯೊಂದಿದೆ. ಅಲ್ಲದೇ ಗುಲಾಬಿ ಬಣ್ಣದ ಹೊಳೆಯುವ ಶಿಲೆಯಲ್ಲಿ ಕೊರೆದ ಗಣೇಶ ಮನಮೋಹಕವಾಗಿದೆ.

ದಕ್ಷಿಣ ಪ್ರಸ್ಥಭೂಮಿಯೆಂದು ಕರೆಸಿಕೊಳ್ಳುವ ಕರ್ನಾಟಕ, ಮಹಾರಾಷ್ಟ್ರಗಳ ಭೂತಳದಲ್ಲಿ ಸಿಕ್ಕಿದ ಹರಳುಕಲ್ಲುಗಳ ಲೋಕವೂ ತೆರೆದುಕೊಳ್ಳುತ್ತದೆ. ಇವು ತಾನಾಗಿ ಆಯಾ ರೂಪ ಪಡೆದುಕೊಂಡವು; ಯಾರೂ ಕಡೆದವುಗಳಲ್ಲ ಎಂದರೆ ಅಚ್ಚರಿ ಎನಿಸುತ್ತದೆ. ಯಾಕೆಂದರೆ ಪ್ರಕೃತಿಯೇ ಇಲ್ಲಿ ಕಲಾವಿದ! ಕಲ್ಲು ಎಂದ ಮೇಲೆ ಅದೊಂದು ಅಪಾರದರ್ಶಕ ವಸ್ತು ಎಂದು ನಾವು ಭಾವಿಸಿದರೆ ಇಲ್ಲಿ ಮೋಸಹೋಗುತ್ತೇವೆ. ಯಾಕೆಂದರೆ ಇಲ್ಲಿನ ಕಲ್ಲುಗಳು ಪಾರದರ್ಶಕ.

ಒಂದೊಂದು ಹರಳೂ ತಳೆದಿರುವ ರೂಪ ವಿಸ್ಮಯ ಹುಟ್ಟಿಸುತ್ತದೆ. ಬಣ್ಣಗಳಂತೂ ನೀಲಿ, ಜಾಂಬಳಿ, ಅಚ್ಚಬಿಳಿ, ಕಡು ಹಸಿರು..! ಕೊನೆಗೆ ಬಣ್ಣಗಳ ಬಗೆಗಿನ ನಮ್ಮ ಜ್ಞಾನವೇ ಸೋಲುತ್ತವೆ. ಅವು ಬೆಳಕಿಗೆ ಹೊಳೆಯುವುದರಿಂದ ಕಲ್ಲರಳಿ ಹೂವಾಗಿ ಬೇರೆಯದೇ ಲೋಕ ಸೃಷ್ಟಿಯಾಗುತ್ತದೆ.